ರಾಜ್ಯ ಸಹಕಾರಿ ಸಂಘಗಳು ಸಬ್ಸಿಡಿಗಾಗಿ ಹಣ ಪಡೆಯುವಲ್ಲಿ ವಿಫಲವಾಗಿರುವ ಬಗ್ಗೆ.

೪೦೬ ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ). –ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದ ಸಹಕಾರಿ ಸಂಘಗಳು ಸಬ್ಸಿಡಿಗಾಗಿ ಹಣ ಪಡೆಯುವಲ್ಲಿ ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಇಂತಹ ಸಬ್ಸಿಡಿ ಹಣ ನೀಡುವುದರಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಇ) ವಿಳಂಬವಾಗದಂತೆ ಕ್ರಮ ಕೈಗೊಳ್ಳಲಾಗುವುದೇ? ಹಾಗೂ ಇಂತಹ ವಿಳಂಬಕ್ಕೆ ಕಾರಣರಾರು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿನ ಕೃಷಿ ಸಹಕಾರ ಸಂಘಗಳು ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬಾಂಕುಗಳು ೧೯೮೨-೮೩ ಹಾಗೂ ೧೯೮೩-೮೪ನೇ ಸಾಲಿನಲ್ಲಿ ಅನುಕ್ರಮವಾಗಿ ಮಂಜೂರಾತಿಯಾದ ಸಾಲಗಳಿಗೆ ಸಂಪೂರ್ಣ ಸಹಾಯ ಧನವನ್ನು ಪಡೆದಿವೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳ್ತಂಗಡಿಯ ಭೂ ನ್ಯಾಯ ಮಂಡಳಿ

೫೮೫. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೆಳ್ತಂಗಡಿಯ ಭೂನ್ಯಾಯ ಮಂಡಳಿಯಲ್ಲಿ ಹಕ್ಕುಪಟ್ಟಿ ಸಲ್ಲಿಸಿದವರ ಕಡತಗಳು ಹಾಗೂ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ತೊಂದರೆಗೀಡಾದವರಿಗೆ ಸೂಕ್ತ ನ್ಯಾಯ ಒದಗಿಸಲಾಗುವುದೇ ?

ಇ) ಈ ಬಗ್ಗೆ ಭೂ ನ್ಯಾಯ ಮಂಡಳಿಯ ಅಧಿಕಾರಿಗಳ ಹಾಗೂ ನೌಕರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು):—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಮೈಸೂರಿನ ಜನತಾ ಬಜಾರಿನಲ್ಲಿ ನಡೆದಿರುವ ವಿದೇಶಿ ನೈಲಾನ್ ಜಿಪ್‌ಗಳ ಅಕ್ರಮಗಳ ಮಾರಾಟ

೧೬೮೮ ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಮೈಸೂರು ಜನತಾ ಬಜಾರಿನಲ್ಲಿ ಪಡೆದಿರುವ ವಿದೇಶಿ ನೈಲಾನ್ ಜಿಪ್‌ಗಳ ಅಕ್ರಮ ಮಾರಾಟದ ಬಗ್ಗೆ ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಭಾರತದ ರಾಷ್ಟ್ರೀಯ ಸಹಕಾರಿ ಬಳಕೆದಾರರ ಸಂಘದ ಅಧ್ಯಕ್ಷರ ಸಮಕ್ಷಮವೆ ೇ ನೈಲಾನ್ ಜಿಪ್‌ಗಳನ್ನು ಕೊಡಲಾಯಿತೆಂದು ಜನತಾ ಬಜಾರ್ ಮೈಸೂರಿಗೆ ಪತ್ರ ಬರೆದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಈವರೆಗೆ ಏನು ಕ್ರಮ ಕೈಗೊಂಡಿದ್ದಾರೆ?